ಲುಕ್ಸಾನು ಆಗುವ ಸಂಭವ ಇದೆ. ಅದನ್ನೆಲ್ಲಾ ಪರಿಶೀಲಿಸಿ, ನಿಮ್ಮ ವರ್ಗದವರಿಗೆ ಈಗಿರತಕ್ಕ ಅರ್ಹತೆಯನ್ನು ಏನಾದರೂ ಕಡಿಮೆ ಮಾಡುವುದಕ್ಕೆ ಸಾಧ್ಯವಿದೆಯೇ ಎನ್ನುವುದನ್ನು ವಿಚಾರ ಮಾಡುತ್ತೇವೆ.

ಶ್ರೀ ಕರಿಯಣ್ಣ : ಅವರ ಒಂದು ವಾದವನ್ನು ನಾನು ಒಪ್ಪುವುದಿಲ್ಲ. ಏಕೆಂದರೆ, ಸರ್ಕಾರದಲ್ಲಿ ವಾದ ಮಾಡಬೇಕಾದರೆ, ಬಹಳ ಬುದ್ಧಿವಂತಿಕೆ, ಛಾತಿ ಇರಬೇಕಾಗುತ್ತದೆಂದು ಹೇಳುತ್ತಾರೆ. ನೀವು, ಇವರಿಗೆ ಅವಕಾಶವನ್ನೇ ಕೊಡದೇ ಛಾತಿ ಬೇಕಾಗುತ್ತದೆಂದು ಹೇಳುವುದಕ್ಕಾಗುತ್ತದೆಯೇ? ನೀವು ಇಟ್ಟಿರತಕ್ಕ ನಿಯಮಾವಳಿ ಪ್ರಕಾರ ಎಲ್.ಎಲ್.ಬಿ. ಪಾಸಾದರೆ ಸಾಕು. ಆದರೆ ಮತ್ತೊಂದು ನಿಯಮಾವಳಿ ಮಾಡಿಕೊಂಡು ಇವರಿಗೆ ಅವಕಾಶ ಸಿಕ್ಕುವುದಿಲ್ಲವೆಂದು ಹೇಳಿದರೆ, ಆಗುವುದಿಲ್ಲ. ನೀವು ಅವಕಾಶ ಕೊಟ್ಟು ನೋಡಿ, ನಮ್ಮಲ್ಲಿ. ಅನೇಕ ಉತ್ತಮ ಅಧಿಕಾರಿಗಳು ಇದ್ದಾರೆ. ನೀವೇ ಬಂಗಾರದ ಮೆಡಲ್‌ಗಳನ್ನು ಕೊಟ್ಟಿದ್ದೀರಿ, ಉತ್ತಮವಾದ ನಾನ್ ಅಫಿಷಿಯಲ್ಸ್ ಇದ್ದಾರೆ, ಎಷ್ಟು ಚೆನ್ನಾಗಿ ಕೆಲಸ ಮಾಡಿದ್ದಾರೆ ಎಂಬುದನ್ನು ನೋಡಿದ್ದೀರಿ. ಅದೇ ರೀತಿ ಉತ್ತಮವಾದ ವಕೀಲರು ಇದ್ದಾರೆ. ಆದ್ದರಿಂದ ನೀವು ಅವರಿಗೆ ಅವಕಾಶ ಕೊಡದೆ ಹೇಗೆ ಹೇಳುತ್ತೀರಿ. ಅವರಿಗೆ ಅವಕಾಶ ಕೊಡುವುದಕ್ಕಾಗಿ ಹಾಲಿ ಇರತಕ್ಕ ನಿಯಮಾವಳಿಗಳನ್ನು ಸಡಿಲ ಮಾಡುತ್ತೀರಾ? ನೀವು ಪರಿಶೀಲಿಸುತ್ತೇವೆಂದು ಹೇಳಿದರೆ, ನಮ್ಮ ಜನಾಂಗಕ್ಕೆ ಯಾವುದೂ ಸಿಗುವುದಿಲ್ಲ. ಈಗಾಗಲೇ 40 ವರ್ಷಗಳಾದರೂ ಇನ್ನೂ 20 ಪರ್ಸೆಂಟ್ ತುಂಬುವುದಕ್ಕಾಗುತ್ತಿಲ್ಲ. ಇನ್ನೂ 9 ಪರ್ಸೆಂಟ್‌ನಲ್ಲಿಯೇ ಇದ್ದೇವೆ. ದಯಮಾಡಿ ಸ್ಪಷ್ಟವಾಗಿ ಹೇಳಿ, ದಯವಿಟ್ಟು ನಿಯಮಾವಳಿಯನ್ನು ಸಡಿಲಿಸಿ, ವಕೀಲರಾಗುವುದಕ್ಕೆ ಸಹಾಯ ಮಾಡಿಕೊಡುತ್ತೀರಾ?

ಶ್ರೀ ಹಾರನಹಳ್ಳಿ ರಾಮಸ್ವಾಮಿ : ಪರಿಶೀಲಿಸದೇ ಯಾವುದೇ ಕೆಲಸ ಮಾಡುವುದಕ್ಕಾಗುವುದಿಲ್ಲ. ಪರಿಶೀಲಿಸುತ್ತೇವೆಂದರೆ, ಸಹಾನುಭೂತಿಯಿಂದ ಪರಿಶೀಲಿಸುತ್ತೇವೆ. ಈಗ ಎಷ್ಟು ಪರ್ಸೆಂಟೇಜ್ ಇದೆಯೋ ಅಷ್ಟು ಮತ್ತು ಅದಕ್ಕಿಂತ ಹೆಚ್ಚಿನ ಪ್ರಮಾಣದಲ್ಲಿ ನೇಮಕ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇನೆ.

ವಿಷಯ : ಮರೆನಾಡು ಮತ್ತು ಅಂಬಾರಪುರ ಏತ ನೀರಾವರಿ ಯೋಜನೆ.

ತಡೆ ಹಿಡಿಯಲಾದ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 179 (835)
ಶ್ರೀ ಟಿ. ಬಿ. ಜಯಚಂದ್ರ(ಕಳ್ಳಂಬೆಳ್ಳ) : ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ತುಮಕೂರು ಜಿಲ್ಲೆ ಚಿಕ್ಕನಾಯಕನಹಳ್ಳಿ ತಾಲ್ಲೂಕಿನ ಮರೆನಾಡು ಮತ್ತು ಅಂಬಾರಪುರ ಏತ ನೀರಾವರಿ ಯೋಜನೆಗಳನ್ನು ಡಿ.ಪಿ.ಎ.ಪಿ. ಯೋಜನೆಯ ಅಡಿಯಲ್ಲಿ ಕೈಗೊಂಡಿದ್ದು ಪೂರ್ಣವಾಗದೆ ನಿಂತಿರುವುದು ಸರ್ಕಾರಕ್ಕೆ ತಿಳಿದಿದೆಯೇ?

ಆ) ಈ ಎರಡು ಯೋಜನೆಗಳನ್ನು ಪೂರ್ಣಗೊಳಿಸಲು ಮತ್ತೆ ಬೇಕಾಗಿರುವ

ಹಣವೆಷ್ಟು?

ಇ) ಈ ಯೋಜನೆಗಳನ್ನು ಪೂರ್ಣಗೊಳಿಸುವ ಬಗ್ಗೆ ಸರ್ಕಾರದ ಸ್ಪಷ್ಟ ತೀರ್ಮಾನವೇನು?

ಡಾ॥ ಆರ್. ಬಿ. ಚೌಧರಿ (ಸಣ್ಣ ನೀರಾವರಿ ಸಚಿವರು) :

ಅ) ತಿಳಿದಿದೆ.

ಆ) ಸುಮಾರು 14.05 ಲಕ್ಷ ರೂ.ಗಳು.

ಇ) ಈ ಯೋಜನೆಗಳನ್ನು ಆದ್ಯತೆ ಮೇರೆಗೆ ಪೂರ್ಣಗೊಳಿಸಲು ಕ್ರಮ ಕೈಗೊಳ್ಳಲಾಗುವುದು.

ಶ್ರೀ ಟಿ. ಬಿ. ಜಯಚಂದ್ರ : ಮಾನ್ಯ ಸಭಾಧ್ಯಕ್ಷರೇ, ಮರೆನಾಡು ಮತ್ತು ಅಂಬಾರಪುರ ಏತನೀರಾವರಿ ಯೋಜನೆಗಳನ್ನು ಡಿ.ಪಿ.ಎಪಿ. ಯೋಜನೆಯಲ್ಲಿ ಕೈಗೊಂಡಿದ್ದು, ಅದು ನಿಂತಿರುವುದು ಸರ್ಕಾರಕ್ಕೆ ತಿಳಿದಿದೆ ಎನ್ನತಕ್ಕ ಮಾತನ್ನು ಹೇಳುತ್ತಿದ್ದಾರೆ. ದಯಮಾಡಿ, ಸಚಿವರು ತಿಳಿಯಬೇಕು. 1979ರಲ್ಲೇ ಪ್ರಾರಂಭವಾದ ಈ ಯೋಜನೆಗಳಿಗೆ ಈಗಾಗಲೇ 10 ಲಕ್ಷಕ್ಕೂ ಹೆಚ್ಚು ಹಣವನ್ನು ಖರ್ಚುಮಾಡಲಾಗಿದೆ ಮತ್ತು ಇನ್ನೂ 14 ಲಕ್ಷ ಬೇಕೆಂದು ವರದಿಯಲ್ಲಿ ಹೇಳುತ್ತಿದ್ದಾರೆ. ಇದಾದ ಮೇಲೆ ಆದ್ಯತೆ ಮೇಲೆ ಸಂಪೂರ್ಣಗೊಳಿಸುತ್ತೇವೆಂಬ ಆಶ್ವಾಸನೆಯನ್ನು ಹೇಳುತ್ತಾರೆ. ನಾನು ಶಾಸಕನಾಗಿ ಮೂರು ವರ್ಷಗಳಿಂದಲೂ ಕೂಡ ಈ ಸದನದಲ್ಲಿ ಈ ಪ್ರಶ್ನೆಯನ್ನೂ ಹಾಕಿಲ್ಲದೆ ಇಲ್ಲ. ಅನೇಕ ಪ್ರಶ್ನೆಗಳನ್ನು ಹಾಕಿದ್ದೇವೆ. ಉತ್ತರಗಳೂ ಸಿಕ್ಕಿವೆ, ಆಶ್ವಾಸನೆಗಳೂ ಸಿಕ್ಕಿವೆ. ಆದರೆ, ಕೆಲಸ ಮಾತ್ರ ಆಗಿಲ್ಲ. ಆದರೆ, ಏತಕ್ಕೋಸ್ಕರ ಈ ಮಾತನ್ನು ಹೇಳುತ್ತಿದ್ದೇನೆಂದರೆ, ಈ ಇಲಾಖೆಯನ್ನು ಅಷ್ಟು ಸುಲಭವಾಗಿ ತಿಳಿದುಕೊಳ್ಳಬೇಡಿ. ಆಶ್ವಾಸನೆ ಕೊಟ್ಟು ಫೈಲು ಸಿಗುವುದೇ ಇಲ್ಲ. ಅಂತಹ ಪರಿಸ್ಥಿತಿ ಇರುವುದರಿಂದ ತಾವು ಸ್ವಲ್ಪ ನೋಡಬೇಕು. ನಿಮ್ಮ ಬಗ್ಗೆ ನಮಗೆ ಬಹಳ ಗೌರವ ಇದೆ. ಇದು ಪೊಳ್ಳಾಗಬಾರದು. ಎನ್ನುವ ದೃಷ್ಟಿಯಿಂದ ಹೇಳುತ್ತಿದ್ದೇನೆ. ದಯವಿಟ್ಟು ಯಾವತ್ತು ಪೂರ್ತಿ ಮಾಡುತ್ತೀರಿ ಎಂಬುದನ್ನು ತಿಳಿಸಿ. ಈಗಾಗಲೇ 15 ವರ್ಷಗಳಾಗಿವೆ. ಇನ್ನೂ 15 ವರ್ಷಗಳು ಬೇಕೇ? ಆದ್ಯತೆ ಮೇಲೆ ಎಂದು ಹೇಳಿದರೆ ಅದಕ್ಕೆ ಅಳತೆಗೋಲು ಏನು? ಯಾವತ್ತು ಪೂರ್ಣ ಮಾಡುತ್ತೀರಿ. ಜಿಲ್ಲಾಪರಿಷತ್ ವ್ಯಾಪ್ತಿಯಲ್ಲಿ ಫೈಲ್ ಇದೆ ಎಂದು ಹೇಳುತ್ತೀರಿ. ಇದು ಜಿಲ್ಲಾಪರಿಷತ್ ವ್ಯಾಪ್ತಿಗೆ ಹೋಗುವುದಕ್ಕೆ ಸಾಧ್ಯವೇ ಇಲ್ಲ. ಡಿಪಿಎಪಿ ನಲ್ಲಿ ಯಾವ ಇನ್‌ಕಂಪ್ಲೀಟ್ ವರ್ಕ್ಸ್ ಇವೆ, ಅವು ಮೈನರ್ ಇರಿಗೇಷನ್‌ಗೆ ಬರತಕ್ಕಂಥಾದ್ದು. ನೀವು ಜಿಲ್ಲಾಪರಿಷತ್‌ನಲ್ಲಿ ಇಟ್ಟುಕೊಂಡು ಕೆಲಸವನ್ನು ಮಾಡಿಕೊಡುತ್ತೇವೆಂದು ಆಶ್ವಾಸನೆ ಕೊಡುತ್ತೀರಿ. ಇವತ್ತು ಜಿಲ್ಲಾಪರಿಷತ್ ವ್ಯಾಪ್ತಿಯಿಂದ ಮಾಡಿಸುತ್ತೀರೋ ಅಥವಾ ನಿಮ್ಮ ಇಲಾಖೆಯಿಂದ ಮಾಡಿಸುತ್ತೀರೋ ದಯಮಾಡಿ ತಿಳಿಸಿ. ಯಾವತ್ತು ಮಾಡುತ್ತೀರಿ ಎನ್ನುವುದನ್ನು ನಿರ್ದಿಷ್ಟವಾಗಿ ಹೇಳಿ.

ಡಾ ॥ ಆರ್. ಬಿ. ಚೌಧರಿ : ಮಾನ್ಯ ಅಧ್ಯಕ್ಷರೇ, ಡಿ. ಪಿ. ಎ. ಪಿ. ಅಡಿಯಲ್ಲಿ ತೆಗೆದುಕೊಂಡಂತಹ ಕಾಮಗಾರಿಗಳು ಇದೇ ರೀತಿಯಾಗಿ ನಮ್ಮ ರಾಜ್ಯದಲ್ಲಿ ಅರ್ಥಕ್ಕೆ ನಿಂತ ಉದಾಹರಣೆಗಳು ಇವೆ. ಅದರ ಸಲುವಾಗಿ ರಸ್ತೆ ರೋಕೋ ಕೂಡ ಕೆಲವೊಂದು ಕಡೆಗಳಲ್ಲಿ ನಡೆದಿರುವುದು ಸರ್ಕಾರದ ಗಮನಕ್ಕೆ ಬಂದಿದೆ. ಡಿ. ಪಿ. ಎ. ಪಿ. ಅಡಿಯಲ್ಲಿ ತೆಗೆದುಕೊಂಡಂತಹ ಏತ ನೀರಾವರಿ ಯೋಜನೆಗಳನ್ನು 1987ರಲ್ಲಿ ಜಿಲ್ಲಾಪರಿಷತ್ತಿಗೆ ವರ್ಗಾವಣೆ ಮಾಡಿದ್ದಾರೆ. ನಿಜವಾಗಿಯೂ ಮಾನ್ಯ ಜಯಚಂದ್ರರವರು ಹೇಳಿದ ಹಾಗೆ ಇದನ್ನು ಜಿಲ್ಲಾಪರಿಷತ್ತಿಗೆ ವರ್ಗಾವಣೆ ಮಾಡಿದೆ. ಚಿಕ್ಕನೀರಾವರಿ ಖಾತೆಗೆ ವಹಿಸಿಕೊಡಬೇಕಾಗಿತ್ತು. ಆದರೆ ಏಕೆ ಕೊಟ್ಟಿಲ್ಲವೋ ಗೊತ್ತಾಗಲಿಲ್ಲ. 1987ನೇ ಇಸವಿಯಲ್ಲಿ ಸರ್ಕಾರ ಈ ಎರಡೂ ಏತ ನೀರಾವರಿ ಯೋಜನೆಗಳನ್ನು ಜಿಲ್ಲಾಪರಿಷತ್ತಿಗೆ ವಹಿಸಿಕೊಟ್ಟಿರುವುದರಿಂದ 1983-84ರ ಆಯವ್ಯಯದಲ್ಲಿ ಇದನ್ನು ಸೇರಿಸಿ ಆದಷ್ಟು ಶೀಘ್ರವಾಗಿ ಮಾಡಿಕೊಡಲಿಕ್ಕೆ ಜಿಲ್ಲಾಪರಿಷತ್ತಿಗಳಿಗೆ ಆದೇಶ ನೀಡಲಾಗಿದೆ. 5 ಲಕ್ಷಕ್ಕಿಂತ ಹೆಚ್ಚಿನ ಅಂದಾಜು ಇರುವ ಕಾಮಗಾರಿಗಳನ್ನು ಡಿ.ಪಿ.ಎ.ಪಿ. ಅಡಿಯಲ್ಲಿ ಮುಂದುವರಿಸಬಾರದು ಎಂದು ಭಾರತ ಸರ್ಕಾರದ ಸೂಚನೆ ಕೂಡ ಇರುವುದರಿಂದ ಒಂದು ಗೊಂದಲಮಯ ವಾತಾವರಣ ಉಂಟಾಗಿದೆ. ಇದರ ಸಲುವಾಗಿ ವೈಜ್ಞಾನಿಕ ನಿಲುವು ತಳೆಯಬೇಕಾಗಿದೆ. ಸರ್ಕಾರ ಇದರ ಬಗ್ಗೆ ಪರಿಶೀಲನೆ ಮಾಡುತ್ತದೆ.

ಶ್ರೀ ಟಿ. ಬಿ. ಜಯಚಂದ್ರ : ಮಾನ್ಯ ಅಧ್ಯಕ್ಷರೇ, ಇದರಲ್ಲಿ, ವೈಜ್ಞಾನಿಕ ತೀರ್ಮಾನ ಏನೂ ಇಲ್ಲ. ಮಾನ್ಯ ಮುಖ್ಯಮಂತ್ರಿಗಳು ಕೂಡ ಸದನದಲ್ಲಿದ್ದಾರೆ. ಈ ರೀತಿ ಅರ್ಧಂಬರ್ಧ ಆಗಿರುವಂತಹ ಕಾಮಗಾರಿಗಳಿಗೆ ಸುಮಾರು 20-30 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದರೆ ಪೂರ್ಣಗೊಳಿಸಬಹುದು. ಈಗ ಸರ್ಕಾರ 60 ಕೋಟಿ ರೂ.ಗಳನ್ನು ಖರ್ಚು ಮಾಡಿ ಇನ್ನು 20 ಕೋಟಿ ರೂ.ಗಳನ್ನು ಖರ್ಚು ಮಾಡಿದರೆ ಈ ಕಾಮಗಾರಿಗಳನ್ನು ಪೂರ್ತಿ ಮಾಡುವುದಕ್ಕೆ ಸಾಧ್ಯವಾಗುತ್ತದೆ. ಅದಕ್ಕೆ ಸೆಪರೇಟ್ ಬಜೆಟ್ ಪ್ರಾವಿಜನ್ ಮಾಡಬೇಕಾಗುತ್ತದೆ. ಇದನ್ನು ನೀರಾವರಿ ಇಲಾಖೆಗೆ ವಹಿಸಿ ಮುಗಿಸಿಕೊಡಬೇಕಾಗುತ್ತದೆ. ಇವತ್ತು ಪ್ಲಾನಿಂಗ್ ಡಿಪಾರ್ಟ್‌ಮೆಂಟ್‌ನವರು ಇದು ಮೈನರ್ ಇರಿಗೇಷನ್‌ಗೆ ಟ್ರಾನ್ಸ್‌ಫರ್ ಆಗಿದೆ ಎಂದು ಹೇಳುತ್ತಾರೆ. ಅದಕ್ಕೆ ಬಜೆಟ್ ಪ್ರಾವಿಜನ್ ಮಾಡಿಲ್ಲ. ಅದಕ್ಕೆ ದಯಮಾಡಿ ಮಾನ್ಯ ಮುಖ್ಯಮಂತ್ರಿಗಳನ್ನು ಕೇಳುತ್ತೇನೆ. ತಾವು ಈ ಬಗ್ಗೆ ಒಂದು ಅಂತಿಮ ತೀರ್ಮಾನವನ್ನು ತೆಗೆದುಕೊಳ್ಳಬೇಕು. ಈ ಮಧ್ಯೆ ನನ್ನ ಕೆಲವು ಪ್ರಶ್ನೆಗಳಿಗೆ ಉತ್ತರ ಕೊಡಲಿಲ್ಲ. ಇದನ್ನು ಜಿಲ್ಲಾಪರಿಷತ್ ವತಿಯಿಂದ ಮಾಡಿಕೊಡುತ್ತೀರೋ ಅಥವಾ ನಿಮ್ಮ ಇಲಾಖಾವತಿಯಿಂದ ಮಾಡಿಕೊಡುತ್ತೀರೋ ಎಂದು ಸ್ಪಷ್ಟವಾಗಿ ಹೇಳಬೇಕು.

ಡಾ ॥ ಆರ್. ಬಿ. ಚೌಧರಿ : ಮಾನ್ಯ ಅಧ್ಯಕ್ಷರೇ, ಜಿಲ್ಲಾ ಪರಿಷತ್ತು ಮಾಡಿಕೊಡದಿದ್ದರೆ ಯಾವ ಯಾವ ಕಾಮಗಾರಿಗಳನ್ನು ಮಾಡಿಕೊಟ್ಟಿರುವುದಿಲ್ಲ. ಅದರ ಪಟ್ಟಿ ಕಳುಹಿಸಿಕೊಡಿ. ನಮ್ಮ ಇಲಾಖಾ ವತಿಯಿಂದ ಪರಿಶೀಲನೆ ಮಾಡಿ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇವೆ.

ಅಧ್ಯಕ್ಷರು : ಪ್ರಶ್ನೋತ್ತರ ಕಾಲ ಮುಗಿಯಿತು.

ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು